ಸಾಕ್ಷಿಗೆ ದಿನಾಂಕಃ **13.09.2024** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಆರೋಪಿತರ ಪರ ಃಶ್ರೀ. ಕೆ ಎಸ್ ಎಸ್ ವಕೀಲರಿಂದ

ನಾನು ಬಿ ಕಾಂ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನ ರಾ ಪುರದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾವು ಮೂಲತಃ ಕೊಡಗು ಜಿಲ್ಲೆ ಎಂದರೆ ಸರಿ. ನಮ್ಮ ತಂದೆ ವಾಚರ್ ಆಗಿ ನ ರಾ ಪುರದಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ ಎಂದರೆ ಸರಿ. ಸುಮಾರು 25 ವರ್ಷದಿಂದ ನಾವು ಸುಗ್ಗಪ್ಪನ ಮಠದ ಹತ್ತಿರ ವಾಸವಾಗಿರುತ್ತೇವೆ. ನಾವು 25 ವರ್ಷಗಳಿಂದ ವಾಸವಾಗಿದ್ದರಿಂದ ಅಕ್ಕಪಕ್ಕದವರು ನಮಗೆ ಪರಿಚಯರಾಗಿದ್ದು, ಅವರ ಜೊತೆ ವಿಶ್ವಾಸದಿಂದ ಇದ್ದೇವೆಂದರೆ ಸರಿ. ನನ್ನ ತಂದೆ ಕರ್ತವ್ಯದಲ್ಲಿರುವಾಗಲೇ ಮರಣ ಹೊಂದಿದ್ದರಿಂದ ಚಾಸಾ-1 ರವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ಸಿಕ್ಕಿರುತ್ತದೆ ಎಂದರೆ ಸರಿ.

1 ರಿಂದ 3 ನೇ ಆರೋಪಿತರು ಸುಗ್ಗಪ್ಪನ ಮಠದ ಹತ್ತಿರ ವಾಸವಾಗಿರುತ್ತಾರೆ. 5 ನೇ ಆರೋಪಿ ಮುತ್ತಿನಕೊಪ್ಪದ ವಾಸಿ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 4 ನೇ ಆರೋಪಿ ಹೌಸಿಂಗ್ ಬೋರ್ಡ್ ನಲ್ಲಿ ಮುಂಚೆ ವಾಸವಾಗಿದ್ದು ಪ್ರಸ್ತುತ ತರೀಕೆರೆಯಲ್ಲಿ ವಾಸವರಾಗಿರುತ್ತಾರೆಂದರೆ ಸರಿ. 1 ನೇ ಆರೋಪಿತರ ತಂದೆ ತೀರಿಕೊಂಡಿರುತ್ತಾರೆಂದರೆ ಸರಿ. 1 ನೇ ಆರೋಪಿಯ ಹೆಂಡತಿ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-3 ನಮ್ಮ ಸಿಬ್ಬಂದಿ ವರ್ಗದವರು ಎಂದರೆ ಸರಿ. ನಾನು ರಾವೂರಿನಲ್ಲಿ ದಿನಗೂಲಿ ಕೆಲಸ ಮಾಡುತ್ತೇನೆ.

ಚಾಸಾ-6 ಚಾಸಾ-3 ರವರ ತಂದೆ ಎಂದರೆ ಸರಿ. ನಮ್ಮ ಮನೆಯಿಂದ ಚಾಸಾ-6 ರವರ ಮನೆ ಸುಮಾರು 200 ಮೀ ದೂರ ಆಗುತ್ತದೆ. ಅವರ ಮನೆ ಮತ್ತು ನಮ್ಮ ಮನೆಯ ಮಧ್ಯೆ5 ಮನೆಗಳು ಇವೆ. ಚಾಸಾ-5 ರವರ ಮನೆ ನಮ್ಮ ಮನೆಯಿಂದ ಒಂದು ಮನೆ ಬಿಟ್ಟು ಇರುತ್ತದೆ. ಚಾಸಾ-7 ರವರ ಮನೆ ನಮ್ಮ ಮನೆಯಿಂದ 2 ಎರಡು ಮನೆಗಳ ನಂತರ ಇರುತ್ತದೆ.

ಹೇಳಲಾದ ಕೃತ್ಯ ಸ್ಥಳದಿಂದ ನಮ್ಮ ಮನೆ 200 ಮೀ ಆಗಿರುತ್ತದೆ. ನಾವು ನೆಡುತೋಪುಗಳಲ್ಲಿ ಗಿಡ ನೆಡಲು, ಟ್ರೆಂಚ್ ಹೊಡೆಯಲು, ಟ್ರ್ಯಾಕ್ಟರ್ ಕೆಲಸಕ್ಕೆ ದಿನಗೂಲಿ ನೌಕರರನ್ನು ನೇಮಕ ಮಾಡಿಕೊಳ್ಳುತ್ತೇವೆಂದರೆ ಸರಿ. ಸದರಿ ದಿನಗೂಲಿ ನೌಕರರನ್ನು ನೇಮಕ ಮಾಡಿಕೊಳ್ಳಲು ತಾತ್ಕಾಲಿಕ ವಹಿಯನ್ನು ಇಟ್ಟಿರುತ್ತೇವೆ. ಸದರಿ ತಾತ್ಕಾಲಿಕ ವಹಿಯನ್ನು ಚಾಸಾ-1 ರವರು ಮೇಲಾಧಿಕಾರಿಗಳಿಗೆ ಕಳುಹಿಸಿ ಕೂಲಿಯನ್ನು ಕೊಡುತ್ತಾರೆಂದರೆ ಸರಿ. ಹೆಸರುಗಳ ಮೇಲೆ ಕೂಲಿ ನೀಡುವುದಿಲ್ಲ, ಆಳುಗಳ ಅಂಕೆ ಸಂಖ್ಯೆ ಮೇಲೆ ಕೂಲಿ ನೀಡುತ್ತೇವೆ. ನಾವು ಯಾವುದೇ ವೋಚರ್ ಮೇಲೆ ದಿನಗೂಲಿ ನೌಕರರ ಸಹಿ ಪಡೆದು ಕೂಲಿಯನ್ನು ನೀಡುವುದಿಲ್ಲ. ನಮಗೆ ದಿನಗೂಲಿ ಜನರು ಎಲ್ಲಿ ಸಿಗುತ್ತಾರೋ ಅಲ್ಲಿಂದ ನಾವು ಆಳುಗಳನ್ನು ನೇಮಕ ಮಾಡಿಕೊಳ್ಳುತ್ತೇವೆ.

ಘಟನೆ ನಡೆಯಿತು ಎನ್ನಲಾದ ಸ್ಥಳ ನೀಲಗಿರಿ ನೆಡುತೋಪು ನಲ್ಲಿ ಜನಸಂದಣಿ ಇರುತ್ತದೆ ಎಂದರೆ ಸರಿ. ನಮ್ಮ ನೀಲಿಗಿರಿ ನೆಡುತೋಪಿನಲ್ಲಿ ಆರೋಪಿತರು ಮತ್ತು ಅವರ ತಂದೆ-ತಾಯಿಗಳು ಆಳುಗಳಾಗಿ ಕೆಲಸ ಮಾಡಿಕೊಂಡಿರುತ್ತಾರೆಂದರೆ ಸರಿ. ಚಾಸಾ-1 ರವರು ಕರ್ತವ್ಯದ ವೇಳೆಯಲ್ಲಿ ಮಧ್ಯಪಾನ ಮಾಡಿಕೊಂಡು ಸಾರ್ವಜನಿಕರಿಗೆ ಬಯ್ಯುವುದು ಮಾಡುತ್ತಿದ್ದರು ಎಂದು ಅವರ ಮೇಲೆ ಆಪಾದನೆ ಇರುತ್ತದೆ ಎಂದರೆ ಸರಿಯಲ್ಲ. ಮಧ್ಯಪಾನ ಮಾಡಿ ವಾಹನ ಚಾಲನೆ ಮಾಡಿರುತ್ತಾರೆಂದು ನ ರಾ ಪುರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು ಅದಕ್ಕೆ ಚಾಸಾ-1 ದಂಡ ಕಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಚಾಸಾ-1 ಮಧ್ಯಪಾನ ಮಾಡಿಕೊಂಡು ಸಾರ್ವಜನಿಕರಿಗೆ ಬಯ್ಯುವುದನ್ನು ಆರೋಪಿತರು ಚಾಸಾ-1 ರವರ ಮೇಲಾಧಿಕಾರಿಗಳಿಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ನಮ್ಮ ತಾಯಿ ಆಳುಗಳನ್ನು ತನಗೆ ಇಷ್ಟಾಚಾರ ಕರೆಸಿಕೊಳ್ಳುವುದು, ಟ್ರ್ಯಾಕ್ಟರ್ ಗಳನ್ನು ಕರೆಸಿಕೊಂಡು ಕೆಲಸ ಮಾಡಿಕೊಂಡು ಸರಿಯಾದ ಕೂಲಿ ಹಣ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ಆರೋಪಿತರು ಚಾಸಾ-1 ರವರ ಮೇಲಾಧಿಕಾರಿಗಳ ಗಮನಕ್ಕೆ ತಂದಿರುತ್ತಾರೆಂದರೆ ಸರಿಯಲ್ಲ.

ಹೇಳಲಾದ ಕೃತ್ಯ ಸ್ಥಳವಾದ ನೀಲಗಿರಿ ನೆಡುತೋಪಿನಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ಘಟನಾ ಸ್ಥಳದಲ್ಲಿ ಟ್ರ್ಯಾಕ್ಟರ್, ಗರಗಸ, ಕತ್ತಿ , ಬೆಳಕಿನ ಸಾಧನಗಳು ಕಂಡು ಬಂದಿರುವುದಿಲ್ಲ ಎಂದರೆ ಸರಿ. ಸದರಿ ವಸ್ತುಗಳನ್ನು ಚಾಸಾ-1 ರವರ ಇಲಾಖೆಯವರು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ.

ಆರೋಪಿತರು ನಮ್ಮ ಮನೆ ಹತ್ತಿರ ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಅವರ ತಂದೆ-ತಾಯಂದಿರು ಚಾಸಾ-1 ರವರ ಹತ್ತಿರ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದು ಅವರ ಬಳಿ ನಮ್ಮ ತಾಯಿ ಹೆಚ್ಚಿನ ಕೆಲಸ ತೆಗೆದುಕೊಂಡು ಸರಿಯಾಗಿ ಹಣ ನೀಡದೆ ಇರುವುದರಿಂದ ಆರೋಪಿತರು ಮೇಲಾಧಿಕಾರಿಗಳಿಗೆ ತಿಳಿಸಿದ್ದರಿಂದ ಮತ್ತು ಚಾಸಾ-1 ರವರು ಮದ್ಯಪಾನ ಮಾಡಿಕೊಂಡು ಕೂಲಿ ಹಣ ಬಗ್ಗೆ ಆರೋಪಿತರಿಗೆ ಅಸಭ್ಯವಾಗಿ ವರ್ತನೆ ಮಾಡಿರುವ ವಿಚಾರ ಆರೋಪಿತರು ಮೇಲಾಧಿಕಾರಿಗಳಿಗೆ ತಿಳಿಸಿದ್ದರಿಂದ ಆರೋಪಿತರು ಚಾಸಾ-1 ರವರಿಗೆ ಯಾವುದೇ ಹಲ್ಲೆ ಮಾಡದಿದ್ದರೂ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿನಗೂಲಿ ನೌಕರರನ್ನು ನೇಮಕ ಮಾಡುವುದು ಮತ್ತು ಅವರಿಗೆ ಕೂಲಿ ಹಣ ನೀಡುವ ಕೆಲಸ ನಮ್ಮ ತಾಯಿ ಕೈಯಲ್ಲಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಾಯಿ ಆರೋಪಿತರು ಮತ್ತು ಅವರ ತಂದೆ-ತಾಯಿ ಜೊತೆ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಾಯಿ, ಚಾಸಾ-1 ಹಾಗೂ ನಾನು ದಿನಗೂಲಿ ನೌಕರರ ಪಟ್ಟಿಯ ಪುಸ್ತಕದಲ್ಲಿ ಆಳುಗಳ ಅಂಕೆ ಸಂಖ್ಯೆ ಜಾಸ್ತಿ ತೋರಿಸಿ ಕಡಿಮೆ ಆಳುಗಳಿಂದ ಕೆಲಸ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ಹೆಚ್ಚು ಅಂಕೆ ಸಂಖ್ಯೆ ತೋರಿಸಿರುವ ಆಳುಗಳ ದಿನಗೂಲಿ ಹಣವನ್ನು ನಾವು ಬಳಸಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ.

ಃಃ ಮರು ವಿಚಾರಣೆ ಇಲ್ಲಃಃ

**(ದಿನಾಂಕಃ 13.09.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

CC.No. 378/2020PW2

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ